**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 8/2014**

**ದೋ.ಸಾ. : 15 ಪ್ರಾ.ಸಾ. : 11**

ಸಾಕ್ಷಿಯ ಹೆಸರು : ರವೀಂದ್ರ
ತಂದೆಯ ಹೆಸರು : ಶಿವಾನಂದ ಜೋಶಿ
ವಯಸ್ಸು : 63 ವರ್ಷ
ಉದ್ಯೋಗ : ನಿವೃತ್ತ ಮುಖ್ಯ ವ್ಯವಸ್ಥಾಪಕರು , Corporation Bank, Ankola
ವಾಸ : ಸಾಂಗ್ಲಿ, ಮಹಾರಾಷ್ಟ್ರ

**ದಿನಾಂಕಃ 16-11-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ</u>**

1. ನನಗೆ ಕಳುಹಿಸಿರುವ ಸಾಕ್ಷಿ ಕರೆ ಪತ್ರದಲ್ಲಿ ನನ್ನ ಹೆಸರನ್ನು ರವೀಂದ್ರ ಆರ್. ಜೋಶಿ ಎಂದು ತಪ್ಪಾಗಿ ನಮೂದಿಸಲಾಗಿದೆ . ನನ್ನ ಹೆರಸು ರವೀಂದ್ರ ಶಿವಾನಂದ ಜೋಶಿಯಾಗಿದೆ . ನಾನು 2009 ರಿಂದ 2011 ರವರೆಗೆ Corporation Bank, Ankola ಶಾಖೆಯಲ್ಲಿ ವ್ಯವಸ್ಥಾಪಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಮೈಸೂರು ಲೋಕಾಯುಕ್ತ ಪೊಲೀಸ್ ನವರು ದಿನಾಂಕ 06.05.2010 ರ ಪತ್ರದ ಮೂಲಕ ಶ್ರೀ ನರೇಂದ್ರ ಹಿತ್ತಲಮಕ್ಕಿ ಮತ್ತು ಇತರರ ಬಗ್ಗೆ ಅವರು ನಮ್ಮ ಶಾಖೆಯ ಬ್ಯಾಂಕ್ ನಲ್ಲಿ ಹೊಂದಿರುವ ಖಾತೆಯ ವಿವರವನ್ನು ಕೇಳಿದ್ದರು. ದಿನಾಂಕ 04.05.2010 ರವರೆಗೆ ಅವರುಗಳ ಖಾತೆಯಲ್ಲಿ ಇರುವ ಅಂತಿಮ ಶಿಲ್ಕು ವಿವರವನ್ನು ಕೇಳಿದ್ದರು. ಈಗ ಆ ಪತ್ರ ನೋಡಿರುತ್ತೇನೆ. ಅದು ನೆರಳಚ್ಚು ಪ್ರತಿಯಾಗಿರುವುದರಿಂದ ನಿಶಾನೆ ಮಾಡಿರುವುದಿಲ್ಲ. ನಾನು ನಮ್ಮ ಬ್ಯಾಂಕಿನ ದಾಖಲಾತಿಗಳನ್ನು ಪರಿಶೀಲಿಸಲಾಗಿ ಖಾತೆ ಸಂ. 7704 ಶ್ರೀ ನರೇಂದ್ರ ಹಿತ್ತಲಮಕ್ಕಿ ರವರ ಹೆಸರಿಗೆ ಇತ್ತು ಬೇರೆ ಯಾವುದೇ ಖಾತೆ ಇರಲಿಲ್ಲ. ಆ ಬಗ್ಗೆ ನಾನು ಸದರಿ ಖಾತೆಗೆ ಸಂಬಂಧಪಟ್ಟ ಲೆಕ್ಕ ತಖ್ತೆಃ ಗಣಕಯಂತ್ರ ಸೃಜಿತ ದಾಖಲಾತಿಯನ್ನು ದಿನಾಂಕ 01.04.2006 ರಿಂದ 31.03.2010 ರ ಅವಧಿವರೆಗೆ ಕಳುಹಿಸಿರುತ್ತೇನೆ. ಈಗ ಆ ಲೆಕ್ಕ ತಖ್ತೆಃ ನೋಡಿರುತ್ತೇನೆ. ಅದು ಐದು ಹಾಳೆ ಇದೆ. ಪ್ರತಿ ಆರ್ಥಿಕ ವರ್ಷದ ಬಗ್ಗೆ ಪ್ರತ್ಯೇಕ ತಖ್ತೆಃ ಕಳುಹಿಸಿದ್ದೇನೆ. ಅದು ಗಣಕಯಂತ್ರ ಸೃಜಿತ ದಾಖಲಾತಿಯಾಗಿದ್ದು ಅದಕ್ಕೆ ರುಜುವಿನ ಅವಶ್ಯಕತೆ ಇರುವುದಿಲ್ಲ. ಅದನ್ನು ಒಟ್ಟಾರೆಯಾಗಿ

ನಿ.ಪಿ. 150 ಎಂದು ಗುರುತಿಸಲಾಯಿತು. ನಾನು ಅವರು ಬರೆದಿದ್ದ ಪತ್ರದ ಮೇಲೆ ಹಿಂಬರಹ ಬರೆದು ಅದರ ಜೊತೆಯಲ್ಲಿ ನಿ.ಪಿ. 150 ಲೆಕ್ಕ ತಖ್ತೆಃ ಲಗತ್ತಿಸಿ ಕಳುಹಿಸಿರುತ್ತೇನೆ. ಪ್ರತ್ಯೇಕ ಕವಚ ಪತ್ರ ಬರೆದಿರುವುದಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ ಎನ್ ಎನ್ ರವರಿಂದ**

ಏನೂ ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.